ರಿವಾಜು ತಪ್ಪಿ ಹೋಗಿದೆಯಲ್ಲ? ಆತಂಕದಿಂದ ಸೀತಮ್ಮ ಮುಂದಿನ ಬಾಗಿಲು ತೆಗೆದು ಹೊರಗೆ ಬಂದರು. ಬಲಗೈ ಸೆರಗನ್ನು ಮುಂದೆಳೆದುಕೊಂಡು ಮೂಗು ಮುಚ್ಚಿಕೊಂಡಿತು. ಕೊರೊನಾದ ಹೆದರಿಕೆಯಿಂದಲ್ಲ. ಅದ್ಯಾವ ಮನೆಯಲ್ಲಿ ಕಕ್ಕಸುಮನೆ ಕೆಟ್ಟು ಹೋಗಿದೆಯೋ, ಅಲ್ಲಿ ಸುರಿದ ನೀರು ಇಲ್ಲಿ ಮನೆಯೆದುರಿನ ಮೋರಿಯಲ್ಲಿ ಹರಿದುಹೋಗಲು ಶುರುವಾಗಿದೆ. ಅಲ್ಲಲ್ಲಿ ಹೇಲಿನ ಉಂಡೆಗಳು ತೇಲುತ್ತಾ, ಉವ್ವೇ, ನರಕ ಅಂದರೆ ಮತ್ತೇನು? ಮೋರಿನೀರಿನ ವಾಸನೆ ಮೂಗಿಗೆ ಬಡಿಯುತ್ತಿದೆ, ಶಿವರಾಮಯ್ಯ ಕೈ ಕಟ್ಟಿ ಕೂತಿಲ್ಲ. ಆಚೆಕಡೆಯ ಮನೆಯವರಿಗೆ ಹೇಳಿ ಬಂದಿದ್ದಾರೆ. 'ನಮ್ಮನೇಲಿ ಏನಾಗಿಲ್ಲ...' ಎಂದು ಅವರು ತಿಪ್ಪೆ ಸಾರಿಸಿ ಆಗಿದೆ. ಕೊನೇ ಮನೆ ತಮ್ಮದು. ಈಚೆಯ ಪಕ್ಕದ ಮನೆಯಲ್ಲಿ ಸಮಸ್ಯೆ ಆಗಿದ್ದರೆ ತೊಂದರೆ ತಮಗಷ್ಟೇ ವಿನಾ ಉಳಿಕೆಯವರಿಗಲ್ಲ. ಯಾರಿಗೆ ಹೇಳಬೇಕು? ಅದರಲ್ಲೂ ಮುದುಕರು ಅಂದರೆ ಎಲ್ಲರಿಗೂ ಸಸಾರ. ನಿರ್ಲಕ್ಷ್ಯದ ಧೋರಣೆ. ಶಿವರಾಮಯ್ಯನ ಜೋರು ಎಲ್ಲಿ ಹೋಯ್ತೋ? ಜೋರಾಗಿ ಮಾತಾಡಿದರೆ ಕೇಳಬೇಕು ಯಾರು? ತಮಾಷಿ ಅನ್ನುವ ಹಾಗೆ ನಗುತ್ತಾರೆ ಅಷ್ಟೇ. ಮುದಿಸಿಂಹದ ಮಾತನ್ನು ಹೆಂಡತಿಯೊಬ್ಬಳು ಕೇಳಿಸಿಕೊಳ್ಳಬೇಕು, ಅಷ್ಟೇ...

ರಸ್ತೆಯುದ್ದಕ್ಕೂ ಕಣ್ಣು ಹಾಯಿಸಿದರು ಸೀತಮ್ಮ. ಗಂಡನ ತಲೆ ಕಾಣುತ್ತಲ್ಲ. ಪ್ರತಿಸಲ ಹೀಗೇ. ಗಂಡನನ್ನು ಹೊರಗೆಲ್ಲಾದರೂ ಕಳಿಸಿದರೆ ಅವರು ಮನೆಗೆ ಬರುವವರೆಗೆ ಜೀವದಲ್ಲಿ ಜೀವ ಇರುವುದಿಲ್ಲ. ಪುಕುಪುಕು. ಮಾತಿಗೆ ಯಾರಾದರೂ ಸಿಕ್ಕಿದರೆ ನಿಂತಲ್ಲೇ ಬೇರು ಬಿಡುವ ಜಾತಿ. ಕೊರೊನಾ ಬಂದ ಮೇಲೆ ಅದೊಂದು ರಗಳೆ ತಪ್ಪಿದೆ. ಅಗೋ, ಬರುತ್ತಿದ್ದಾರೆ ಶಿವರಾಮಯ್ಯ. ಒಂದು ಕೈಯಲ್ಲಿ ಐದು ಕೆ.ಜಿ. ಅಕ್ಕಿ ತುಂಬಿದ ಕೈಚೀಲ ಹಿಡಿದು, ಅದರ ಭಾರಕ್ಕೆ ಎಂಬಂತೆ ಆ ಕಡೆ ತುಸು ಹೆಚ್ಚು ಬಗ್ಗಿ ಕಾಲೆಳೆದುಕೊಂಡು ಬರುತ್ತಿದ್ದಾರೆ. ಬೇಕಿತ್ತಾ ಇದೆಲ್ಲಾ? ಸ್ವಯಂಕೃತಾಪರಾಧ ಅಲ್ಲವಾ? ಏನು ಮಾಡಿದರೂ ತಡೆಯುತ್ತದೆ, ಏನು ಮಾಡಿದರೂ ನಡೆಯುತ್ತದೆ ಎನ್ನುವ ಪೊಗರು. ಎಲ್ಲರನ್ನೂ ಎದುರು ಹಾಕಿಕೊಂಡು ಸಾಧಿಸಿದ್ದೇನು? ಗಂಡ ಹತ್ತಿರ ಬರುತ್ತಿದ್ದಂತೆ ಅವರ ಕೈಯಿಂದ ಚೀಲ ಇಸಿದುಕೊಳ್ಳಲು ಹೋದರೆ ದುರುಗುಟ್ಟಿದರು ಗಂಡ.

'ಅಲ್ಲಿಂದ ಇಲ್ಲೀವರೆಗೆ ತಂದೋನಿಗೆ ಒಳಗಿನವರೆಗೆ ತರೋಕಾಗಲ್ವಾ? ಸಾಕು ವೇಷ. ನಾನಿನ್ನೂ ಗಟ್ಟಿ ಇದೀನಿ...'

ವಯಸ್ಸಿಗೆ ಸಹಜವಾಗಿ ಆಯಾಸ ಆಗಿರಬೇಕು. ಅದನ್ನು ಇನ್ನೊಂದು ರೀತಿಯಲ್ಲಿ ತೀರಿಸಿಕೊಳ್ಳುತ್ತಿದ್ದಾರೆ ಗಂಡ. ಅನ್ನ ಆಗಿದೆಯಾ ನೋಡಲು ಒಂದು ಅಗುಳು ಹಿಸುಕಿ ನೋಡಿದರೆ ಸಾಕಾಗುವುದಿಲ್ಲವಾ? ಅವರ ಜೊತೆ ಇಷ್ಟು ವರ್ಷ ಸಂಸಾರ ಮಾಡಿದ ತನಗೆ ಅವರ ಸಿಟ್ಟು, ಸೆಡವಿಗೆ ಕಾರಣ ಗೊತ್ತಾಗುವುದಿಲ್ಲವಾ? ಗಂಡನ ಹಿಂದೆ ಹಿಂದೆ ಒಳಗೆ ಬಂದ ಸೀತಮ್ಮ ಮುಂಬಾಗಿಲು ಮುಚ್ಚಿದರು.

'ಮೊದ್ಲು ಚೀಲಾನ ಆ ಮೂಲೇಲಿಡಿ. ಆಮೇಲೆ ಸೋಪು ಹಾಕಿ ಕೈ ತೊಳ್ಕಳಿ...'

'ಗೊತ್ತಿದೆ ನಂಗೆ...'

ಶಿವರಾಮಯ್ಯ ಬಚ್ಚಲು ಹೊಗ್ಗುತ್ತಿದ್ದಂತೆ ಸೀತಮ್ಮ ಕಡೆದಿಟ್ಟ ಮಜ್ಜಿಗೆಯನ್ನು ಒಂದು ಲೋಟಕ್ಕೆ ಅರ್ಧದಷ್ಟು ಬಗ್ಗಿಸಿ, ಮತ್ತರ್ಧ ನೀರು ಸೇರಿಸಿ ಅವರಿಗೆ ತಂದುಕೊಟ್ಟರು. ಮಜ್ಜಿಗೆನೀರು ನೋಡಿ ಶಿವರಾಮಯ್ಯ ಸಂತೃಪ್ತರಾಗಿರಬೇಕು, 'ಏನು ಜನ ಅಂತೀನಿ. ಇನ್ನ್ಯಾವತ್ತೂ ಅಂಗಡೀಲಿ ಸಾಮಾನೇ ಸಿಗಲ್ವೇನೋ ಅನ್ನೋ ಹಾಗೆ ತುಂಬ್ಕಂಬಿಟ್ಟಿದಾರೆ. ರಾತ್ರೀವರೆಗೆ ಅಂಗಡಿ ತೆಗೆದಿರಲ್ವಲ್ಲ?'

ಸೀತಮ್ಮ ಗಂಟಲೊಳಗೆ ಹೂಂಗುಟ್ಟಿದ್ದು ಬಹುಶಃ ಅವರ ಕಿವಿಗೇ ಬಿದ್ದಿರಲಿಕ್ಕಿಲ್ಲ. ಗಂಡ ಖಾಲಿ ಮಾಡಿದ್ದ ಲೋಟ ಇಸಿದುಕೊಂಡು ಅವರು ಅಡುಗೆಮನೆ ಹೊಕ್ಕರು.

***

ಮಧ್ಯಾಹ್ನ ಉಂಡ ಮೇಲೆ ಒಂದು ಗಳಿಗೆ ಉರುಡಿಕೊಳ್ಳಬೇಕು. ನಿದ್ದೆ ಬರಲಿ, ಬಿಡಲಿ, ಪೇಟೆಮನೆ ಸೇರಿಕೊಂಡ ಮೇಲೆ ಕಲಿತುಕೊಂಡ ದುರಭ್ಯಾಸ. ಲೇಪು ಬಿಚ್ಚಬೇಕೆಂದೇನಿಲ್ಲ. ಗಂಡ ಹೆಂಡಿರು ಒಂದೊಂದು ಚಾಪೆ ಬಿಡಿಸಿ, ತಲೆಯಡಿಗೊಂದು ದಿಂಬು ಇಟ್ಟುಕೊಂಡು ವಿಶ್ರಾಂತಿ ಸುಖ ಅನುಭವಿಸುತ್ತಾರೆ. ಸುಖವಾ ಅದು? ಮಾತಿಗೆ ಹೇಳಿದ್ದಷ್ಟೇ. ಹೀಗೆ ಕೆಲಸ ಇಲ್ಲದೆ ಖಾಲಿ ಮಲಗಿಕೊಂಡರೆ ಸಾಕು, ಸೀತಮ್ಮನಿಗೆ ಹಳೆಯ ನೆನಪುಗಳೆಲ್ಲಾ ಸಿನಿಮಾ ಕಥೆಯಂತೆ ಮನಸ್ಸಿನ ಪರದೆಯ ಮೇಲೆ ಒಂದರ ಹಿಂದೊಂದರಂತೆ ನುಗ್ಗಿ ಬರುತ್ತವೆ. ಸಿನಿಮಾ ಕಥೆಯಂತೆ ಕ್ರಮವಾಗಿ ಬರಬೇಕೆಂದೇನಿಲ್ಲ, ಕಲಸುಮೇಲೋಗರದಂತೆ ಯಾವ್ಯಾವುದೋ ಕನವರಿಕೆಗಳು. 'ಥುತ್, ಅವನ್ನೆಲ್ಲಾ ನೆನಪು ಮಾಡ್ಕಂಡು ಈಗ ಆಗಬೇಕಾದ್ದೇನಿದೆ? ಆಯ್ತು, ಹೋಯ್ತು...' ಅಂದುಕೊಂಡರೂ ನೆನಪುಗಳ ಮೆರವಣಿಗೆ ನಿಲ್ಲುವುದಿಲ್ಲ. 'ಸಾಯ್ಲಿ ಅತ್ಲಾಗೆ...' ಎಂದುಕೊಳ್ಳುತ್ತಾ ಮಗ್ಗುಲು ಬದಲಾಯಿಸುತ್ತಾರೆ ಸೀತಮ್ಮ. ಮತ್ತೊಂದೇನೋ ಹುಳು ತಲೆ ಹೊಕ್ಕು ಕೊರೆಯತೊಡಗುತ್ತದೆ.

'ಇವುಗಳಿಂದ ಜನ್ಮೇಪಿ ಬಿಡುಗಡೆಯಿಲ್ಲ' ಅಂದುಕೊಂಡು ಅವುಗಳಿಗೆ ತನ್ನನ್ನು ಒಪ್ಪಿಸಿಕೊಳ್ಳುವುದೊಂದೇ ಉಳಿದಿರುವ ದಾರಿ. ಹಳೆಯ ನೆನಪುಗಳನ್ನು ಮರೆಯುವಂಥ ವರವನ್ನು ದೇವರು ದಯಪಾಲಿಸುವಂತಿದ್ದರೆ 'ಕೊಡು ಮಾರಾಯಾ...' ಎಂದು ಎರಡೂ ಕೈಯೊಡ್ಡಿ ಸ್ವೀಕರಿಸುತ್ತಿದ್ದರು ಸೀತಮ್ಮ. ಅದ್ಯಾವುದೋ ಮರೆವು ಬರುವ ಕಾಯಿಲೆ ಇದೆಯಂತೆ. 'ತಾನು ಸೀತಮ್ಮ' ಎನ್ನುವುದನ್ನೇ ಮರೆಸುವ ಕಾಯಿಲೆಯ ಕುರಿತು ಅವರಿಗೆ ಒಂಥರಾ ತಮಾಷೆ ಎನಿಸಿತು. 'ನಾನ್ಯಾರು?' ಎಂದು ಕೇಳಿಕೊಳ್ಳುವುದಕ್ಕೂ ಬುದ್ಧಿ ಓಡದ ಕಾಯಿಲೆ. ಮರುಕ್ಷಣ ಅವರಿಗೆ ಅನಿಸಿಬಿಟ್ಟಿತು, 'ನಾನ್ಯಾರು? ಯಾರು ನಾನು?' ಒಂದಾನೊಂದು ಕಾಲದಲ್ಲಿ ಸೀತಾಲಕ್ಷ್ಮಿ ಎನ್ನುವ ಸೊಬಗಿನ ನಾಮಧೇಯದಿಂದ ಗುರ್ತಿಸಲ್ಪಡುತ್ತಿದ್ದ ನಾನು ಈಗೇನಾಗಿದ್ದೇನೆ? ಕೈ ಹಿಡಿದ ಗಂಡನಿಗೆ ತನ್ನ ಮೇಲೆ ಪ್ರೀತಿ ಇದೆಯೋ ಇಲ್ಲವೋ ಅದೂ ಗೊತ್ತಿಲ್ಲ. ಮದುವೆಯಾದ ಹೊಸತರಲ್ಲಾದರೂ ಇತ್ತಾ ಅಂದರೆ ನಂಬಿಕೆಯಾಗುತ್ತಿಲ್ಲ. ಇದ್ದುದೆಲ್ಲಾ ಬಿಸಿರಕ್ತದ ಕಾಮನೆ ತಣಿಸುವ ಅನುಬಂಧ. ಅದಕ್ಕೆ ಪ್ರೀತಿ ಎನ್ನುವ ದೊಡ್ಡ ಹೆಸರು ಕೊಡುವುದು ದುಬಾರಿಯಾಗುತ್ತದೆ.

ಮಗ್ಗುಲು ಬದಲಿಸಿ ಗಂಡನ ಕಡೆ ಮುಖ ಮಾಡಿ ಮಲಗಿದರು ಸೀತಮ್ಮ. ಎದೆಯ ಮೇಲೆ ಕೈಯಿಟ್ಟುಕೊಂಡು ದೀರ್ಘವಾಗಿ ಉಸಿರೆಳೆದು ಬಿಡುತ್ತಿದ್ದ ಶಿವರಾಮಯ್ಯನಿಗೆ ನಿದ್ದೆ ಹತ್ತಿದೆಯೆಂದು ದೇಹಭಾಷೆಯಿಂದಲೇ ಅರ್ಥವಾಯ್ತು. ಪುಣ್ಯಾತ್ಮ ಯಾವುದನ್ನೂ ತಲೆಗೆ ಹಚ್ಚಿಕೊಳ್ಳುವುದಿಲ್ಲ. 'ತನ್ನಿಂದ ಹೀಗಾಯ್ತು' ಎನ್ನುವ ಯಾವ ಪಾಪಪ್ರಜ್ಞೆಯೂ ಅವರನ್ನು ಕಾಡುವಂತೆ ಕಾಣುವುದಿಲ್ಲ. ಕೆಲವರು ಇರುವುದೇ ಹೀಗೆ. ಸರಿ, ತಪ್ಪುಗಳ ಕುರಿತು ತಮ್ಮನ್ನು ತಾವು ವಿಮರ್ಶೆ ಮಾಡಿಕೊಳ್ಳುವ ಅಭ್ಯಾಸವೇ ಇಲ್ಲ. ತಾವು ಯಾವತ್ತೂ ತಪ್ಪು ಮಾಡುವವರಲ್ಲ ಎಂದು ಅವರು ಎಷ್ಟು ಗಟ್ಟಿಯಾಗಿ ನಂಬಿಕೊಂಡಿರುತ್ತಾರೆಂದರೆ ತಲೆ ಕುಯ್ದು ಮುಂದಿಟ್ಟರೂ ಅವರು ಪರರ ಮಾತನ್ನು ನಂಬುವುದಿಲ್ಲ. ಇಷ್ಟೆಲ್ಲಾ ಗಹನ ಸಂಗತಿಗಳು ಹೀಗೆಯೇ ಕರಾರುವಾಕ್ಕಾಗಿ ಸೀತಮ್ಮನ ತಲೆಯಲ್ಲಿ ಮಿಂಚಿದುವು ಎಂದರೆ ಅರ್ಧ ಸತ್ಯ. ಇಂಥಾದ್ದೇನೋ ಭಾವನೆ ಮನಸ್ಸಲ್ಲಿ ಸುಳಿದು ಹೋಯ್ತು ಅಂದರೆ ಪೂರ್ತಿ ಸತ್ಯ. ಜಗತ್ತಿನ ಇನ್ನೊಂದು ವೈಚಿತ್ರ್ಯ ಕೂಡಾ ಅವರನ್ನು ಕಾಡುವುದಿದೆ. ರಾಮಾಯಣ ಮಹಾಕಾವ್ಯವನ್ನು ರಚಿಸಿದ ವಾಲ್ಮೀಕಿಯ ಪೂರ್ವಾಶ್ರಮದಲ್ಲಿ, 'ಅವನ ಪಾಪದಲ್ಲಿ ತಮಗೆ ಪಾಲಿಲ್ಲ' ಎಂದು ಸಂಸಾರ ಸ್ಪಷ್ಟವಾಗಿ ಹೇಳಿತಂತೆ. ನಾನೂ ಬೇಕಾದರೆ ಹೇಳಬಲ್ಲೆ, 'ನಿಮ್ಮ ನಡವಳಿಕೆಗೆ ನಾನು ಜವಾಬ್ದಾರಳಾಗಬೇಕಾಗಿಲ್ಲ' ಎಂದು. ಆದರೆ ಕೇಳುವವರು ಯಾರು? ಈ ಪತಿರಾಯರ ನಡವಳಿಕೆಯ ಪರಿಣಾಮದ ಫಲಸ್ವರೂಪವನ್ನು ಅವರೊಬ್ಬರೇ ಅಲ್ಲ, ತಾಳಿ ಕಟ್ಟಿಸಿಕೊಂಡ ತಪ್ಪಿಗೆ ತಾನೂ ಅನುಭವಿಸುತ್ತಿದ್ದೇನೆ, ವಿಧಿಯಿಲ್ಲದೆ.

***

ಸೀತಾಲಕ್ಷ್ಮಿ ಎನ್ನುವ ಹದಿನಾರರ ಎಳೆಪ್ರಾಯದ ಹುಡುಗಿ ತನಗಿಂತಾ ಹತ್ತು ವರ್ಷ ದೊಡ್ಡವನಾದ ಶಿವರಾಮನ ಕೈ ಹಿಡಿದು ಬಲಗಾಲು ಮುಂದಿಟ್ಟು ಅವರ ಮನೆಯ ಹೊಸಿಲು ದಾಟಿ ಮನೆಯೊಳಗೆ ಕಾಲಿಟ್ಟಾಗ ಏನೆಂದರೆ ಏನೂ ಅರಿಯದ ಮುಗ್ಧೆ. ಮಾಧ್ಯಮಿಕ ಶಾಲೆ ಮುಗಿಸುವಷ್ಟಕ್ಕೆ ಕೈದಾಗಿತ್ತು ವಿದ್ಯೆ. ಅಡುಗೆ, ಮನೆಗೆಲಸ, ಕೊಟ್ಟಿಗೆ ಕೆಲಸ ಎಂದು ಆ ಕಾಲದ ಹೆಣ್ಣುಮಕ್ಕಳಿಗೆ ಅತ್ಯಗತ್ಯವಾಗಿ ಇರಬೇಕಾದ ಪ್ರಾಥಮಿಕಜ್ಞಾನದ ಕುರಿತು ಅರಿವು ಮೂಡಿಸಿದ್ದರು ಅಮ್ಮ. ಹುಟ್ಟಿ ಬೆಳೆದ ಹಳ್ಳಿ ಊರಿನಂತೆಯೇ ಇದ್ದ ಮತ್ತೊಂದು ಹಳ್ಳಿಗೆ ನವವಧುವಾಗಿ ಹೋದವಳ ಮನಸ್ಸಿನಲ್ಲಿ ಕಾಮನಬಿಲ್ಲಿನ ರಂಗುಗಳು ಚಿತ್ತಾರ ಬಿಡಿಸಿದ್ದುವು ಅನ್ನುವಂತಿರಲಿಲ್ಲ. ಅಷ್ಟೆಲ್ಲಾ ಯೋಚಿಸುವಷ್ಟು ಬುದ್ಧಿವಂತೆಯೇನಾಗಿರಲಿಲ್ಲ. ಇನ್ನೂ ಹುಡುಗಾಟಿಕೆ ಪೂರ್ತಿ ಹೋಗದೆ ಬೆಳೆದ ಮಗುವಿನಂತೆ ಇದ್ದವಳು ಸೀತಾಲಕ್ಷ್ಮಿ. ಗಂಡನ ಮನೆಯಲ್ಲಿ ತುಂಬು ಕುಟುಂಬ.